ಅ) 6 (ಆರು).

ರಾಜ್ಯದಲ್ಲಿ ವೈದ್ಯರ ನೇಮಕಾತಿ

68 (198): ಶ್ರೀಮತಿ ಮೋಟಮ್ಮ (ಮೂಡಿಗೆರೆ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರವು ಈ ಸಾಲಿನಲ್ಲಿ ರಾಜ್ಯದಾದ್ಯಂತ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿದ ವೈದ್ಯರೆಷ್ಟು ?

ಆ) ಚಿಕ್ಕಮಗಳೂರು ಜಿಲ್ಲೆಯಾದ್ಯಂತ ಖಾಲಿಯಿದ್ದ ವೈದ್ಯರ ಹುದ್ದೆಗಳೆಷ್ಟು ? ಗುತ್ತಿಗೆ ಆಧಾರದ ನೇಮಕಾತಿಗಾಗಿ ಬಂದ ಅರ್ಜಿಗಳೆಷ್ಟು ? ಹಾಗೂ ನೇಮಕಗೊಂಡವರೆಷ್ಟು ?

ಶ್ರೀ. ಎಂ. ವೀರಪ್ಪ ಮೊಯಿಲಿ

(ಮುಖ್ಯಮಂತ್ರಿಗಳು)

ಅ) 380

ಆ) ದಿನಾಂಕ: 14–7–1992ಕ್ಕೆ ಒಟ್ಟು 34 ಹುದ್ದೆಗಳು ಖಾಲಿ ಇದ್ದವು. ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ 31 ಅರ್ಜಿಗಳು ಬಂದಿದ್ದು ಅವುಗಳ ಪೈಕಿ 25 ಅರ್ಜಿಗಳು ಸರಿಯಾಗಿದ್ದವು. ಈ ಪೈಕಿ 24 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ನೇಮಕ ಮಾಡಲಾಗಿದೆ.

ವಿಷಯ:– ಮೂಡಿಗೆರೆ ತಾಲ್ಲೂಕಿನ ಕಳಸಾ ಹೋಬಳಿಯಲ್ಲಿ ಆರಕ್ಷಕರ ವೃತ್ತ.

69 (199) : ಶ್ರೀಮತಿ ಮೋಟಮ್ಮ (ಮೂಡಿಗೆರೆ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೂಡಿಗೆರೆ ತಾಲ್ಲೂಕಿನ ಕಳಸ ಹೋಬಳಿ ಕುದುರೆಮುಖ ಪ್ರದೇಶ ಒಳಗೊಂಡಂತೆ, ಇನ್ನೊಂದು ಆರಕ್ಷಕ ವೃತ್ತದ ಠಾಣೆ ಅಗತ್ಯವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರವು ಮಂಜೂರಾತಿ ನೀಡುವುದೇ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಶಾಲೆಗಳನ್ನು ಮುಂಗಡ ವೇತನ ಅನುದಾನಕ್ಕೆ ಒಳಪಡಿಸುವುದು.

72 (651) ಶ್ರೀ ಬಿ.ಐ. ಪಾಟೀಲ್ (ಉಚ್ಚಾಂಗ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಶಾಲೆಗಳನ್ನು ಮುಂಗಡ ವೇತನ ಅನುದಾನಕ್ಕೆ ಒಳಪಡಿಸುವ ಬಗ್ಗೆ ಸರ್ಕಾರದ ನೀತಿಯೇನು ?

2. ಈ ಕೆಳಗೆ ನಮೂದಿಸಲಾಗಿರುವ ಶಾಲೆಗಳು ನೇರ ಮುಂಗಡ ವೇತನ ಅನುದಾನಕ್ಕೆ ಒಳಪಡಲು ಅರ್ಹವಿದ್ದಾಗ್ಯೂ 8 ವರ್ಷದಿಂದ ಈ ಶಾಲೆಗಳು ವೇತನ ಪಡೆಯುತ್ತಿಲ್ಲ ಎಂಬುದಕ್ಕೆ ಕಾರಣಗಳೇನು ?

ಅ) ಬ್ರಹ್ಮಲಿಂಗ ಪ್ರೌಢಶಾಲೆ, ಸುಳಗೆ (ಹೆಚ್) ಬೆಳಗಾಂ

ಆ) ಗುರುವರ್ಯ ಶ್ಯಾಮರಾವ್ ದೇಸಾಯಿ ಪ್ರೌಢಶಾಲೆ, ಇದ್ದಲಹೊಂಡ

ಇ) ಶ್ರೀ ಕಾಡಸಿದ್ದೇಶ್ವರ ಪ್ರೌಢಶಾಲೆ, ಗುಂಡೇವಾರಿ, ಅಥಣಿ ತಾಲ್ಲೂಕು

ಈ) ಶಾರದ ಬಾಲಕಿಯರ ಪ್ರೌಢಶಾಲೆ, ಹಲಗ, ಬೆಳಗಾಂ

3. ಮೇಲೆ ತಿಳಿಸಲಾಗಿರುವ ಪ್ರೌಢಶಾಲೆಗಳನ್ನು ಮುಂಗಡ ವೇತನ ಅನುದಾನಕ್ಕೆ ಒಳಪಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಸರ್ಕಾರಿ ಆದೇಶ ಸಂಖ್ಯೆ : ಇಡಿ 759 ಎಸ್‌ಇಎಸ್ 91 ದಿನಾಂಕ : 12-8-91ರ ಮೇರೆಗೆ ಶಾಲೆಗಳನ್ನು ಮುಂಗಡ ವೇತನ ಅನುದಾನಕ್ಕೆ ಒಳಪಡಿಸುವ ಪ್ರಸ್ತಾವನೆಗಳನ್ನು ಸಂಬಂಧಿಸಿದ ಜಿಲ್ಲಾ ಪರಿಷತ್ತುಗಳು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.

ಆ) ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಿಂದ ಸದರಿ ಪ್ರೌಢಶಾಲೆಗಳನ್ನು ಮುಂಗಡ ವೇತನ ಅನುದಾನಕ್ಕೆ ಒಳಪಡಿಸುವ ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿದ್ದು ಅನುದಾನ ಸಂಹಿತೆ ನಿಯಮಗಳನುಸಾರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ

ಕಾವೇರಿ ಟ್ರಿಬ್ಯುನಲ್ ವಿವಾದ.

73 (239) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾವೇರಿ ಟ್ರಿಬ್ಯುನಲ್ ವಿವಾದ ಯಾವ ಹಂತದಲ್ಲಿದೆ ?

ಆ) ಈ ವಿವಾದದ ಬಗ್ಗೆ ಸರ್ಕಾರದವರ ನಿಲುವೇನು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ವಿವಾದಕ್ಕೆ ಸಂಬಂಧಪಟ್ಟ ಎಲ್ಲಾ ರಾಜ್ಯಗಳು ತಮ್ಮ ಹೇಳಿಕೆಗಳನ್ನು ಹಾಗೂ ಅದನ್ನು ಬೆಂಬಲಿಸುವ ದಾಖಲೆಗಳನ್ನು ನ್ಯಾಯ ಮಂಡಲಿಗೆ ಸಲ್ಲಿಸಿದೆ. ತಮಿಳುನಾಡು, ಪಾಂಡಿಚೆರಿ ಮತ್ತು ಕೇರಳ ರಾಜ್ಯಗಳು ವಿವಾದದ ಬಗ್ಗೆ ತಮ್ಮ ಮೊದಲ ಹೇಳಿಕೆಯನ್ನು ಮಂಡಿಸಿವೆ. ಕರ್ನಾಟಕವು ದಿನಾಂಕ 20-1-1993ರಂದು ಮೊದಲ ಹೇಳಿಕೆಯನ್ನು ಮಂಡಿಸಬೇಕಾಗಿದೆ.

ಆ) ನ್ಯಾಯ ಮಂಡಲಿಯ ಮುಂದೆ ರಾಜ್ಯದ ವಾದದ ಸಕ್ರಿಯ ಮಂಡನೆ ಮತ್ತು ಮಾತುಕತೆಯಿಂದ ವಿವಾದ ಬಗೆಹರಿಸುವುದರಲ್ಲಿ ತೀವ್ರ ಪ್ರಯತ್ನ.

ಕೃಷ್ಣಾ ಜಲಾನಯನದ ಪ್ರದೇಶದಲ್ಲಿ ಕಾಮಗಾರಿ ಕೆಲಸಗಳಿಗೆ ಮಾಡಲಾದ ವೆಚ್ಚ

76 (243) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;